ಈತ್ತೀಚೆಗೆ ಹೋದ ವರ್ಷದಲ್ಲಿ ತೆಗೆದ ಮೂರು ಬೋರ್‌ವೆಲ್‌ಗಳ ಪೈಕಿ ಒಂದರಲ್ಲಿ ೮ ಸಾವಿರ ಲೀಟರ್ ನೀರು ಸಿಗುತ್ತಿದೆ. ಇದಕ್ಕೆ ಪಂಪ್‌ಸೆಟ್‌ಗಳನ್ನು ಹಚ್ಚಬೇಕೆಂದು ಈಗಾಗಲೇ ಹೇಳಿದ್ದೇನೆ. ಸದ್ಯಕ್ಕೆ ನಾವು ಇಷ್ಟು ಮಾಡಲಿಕ್ಕೆ ಸಾಧ್ಯವಾಗಿದೆ. ಇದನ್ನು ಬಿಟ್ಟು ಬೇರೆ ಹೊಸ ವಿಚಾರಗಳಿದ್ದರೆ ತಾವು ಅದನ್ನು ನನಗೆ ಹೇಳಬೇಕು.

ಶ್ರೀ ಪಾಲ್ತಿಕಾರ್ಜುನ ಪ್ರಸನ್ನ.—(ಹಾಜರಿರಲಿಲ್ಲ)

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—(ಹಾಜರಿರಲಿಲ್ಲ)

(೬) ಸಾರಿಗೆ ಸಂಸ್ಥೆಯಿಂದ ಬೆಂಗಳೂರು ಬೈಂದೂರ್ ಮಾರ್ಗದಲ್ಲಿ ಹೊಸ ಸುವಿಹಾರಿ ಬಸ್ ಹಾಕಲು ಕೋರಿಕೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೆಂಗಳೂರು–ಬೈಂದೂರು ಮಾರ್ಗವಲ್ಲಿ ಹೊಸ ಸುವಿಹಾರಿ ಬಸ್ ಹಾಕಲು ಕೋರಿಕೆ. ಬೆಂಗಳೂರು–ಬೈಂದೂರು ಸುವಿಹಾರಿ ಬಸ್ಸು, ಇದರಲ್ಲಿ ಪಯಣಿಸಿದರೆ ಖಂಡಿತ ಕಡಿಮೆ ಆಗುಸ್ಸು. ಕಿಟಕಿ, ಬಾಗಿಲು, ಬೀಡಿಂಗ್ ಬಾಡಿ–ಎಲ್ಲವೂ 'ಲಟ ಲಟ' ಎನ್ನುವ ಪೋಜು ನೋಡಿ ಪ್ರಯಾಣಿಕರು. ದೂರುವವರು ಬೈಂದೂರು ಬಸ್ಸಿನಲ್ಲಿ ಪಯಣಿಸುವ ಜನರೆಲ್ಲಾ. ''ನಮಗೇಕೆ ಈ ಶಾಪ, ನಮಗೇಕೆ ಈ ತಾಪತ್ರಯದ ಪರಿತಾಪ''. ರಾಜ್ಯರಸ್ತೆ ಸಾರಿಗೆ ನಿಗಮದವರಲ್ಲಿ ಮಾನ್ಯ ಸಚಿವರಲ್ಲಿ ನಾನು ಮಾಡಿದ್ದೆ ಬಹಳ ಸಲ ಅರಿಕೆ. ಒಳ್ಳೆಯ ಬಸ್ಸನ್ನು ಹಾಕಿ ಎಂದು. ಈಗ ಮತ್ತೊಮ್ಮೆ. ಮತ್ತೊಮ್ಮೆ ಆಗ್ರಹದ ಅರಿಕೆ, ಒತ್ತಾಯದ ಕೋರಿಕೆ. ಇತ್ತೀಚೆಗಂತೂ ಬಹಳಷ್ಟು ರೂಟಿನಲ್ಲೂ ಹೊಸ ಬಸ್ಸು. ಬೈಂದೂರಿಗೂ ಹಾಕಲು ಮಾಡಿ ಬಿಗ ದೊಡ್ಡ ಮನಸ್ಸು.

ಶ್ರೀ ಕೆ. ಜಿ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು–ಬೈಂದೂರು ನಡುವೆ ಸಧ್ಯದಲ್ಲಿ ಹೊಸ ಸುವಿಹಾರಿ ಬಸ್ಸನ್ನು ಓಡಿಸಲಾಗುವುದು.

ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

(ಬಂದರು, ಮೀನುಗಾರಿಕೆ, ಮತ್ತು ನಗರಾಭಿವೃದ್ಧಿ ಇಲಾಖಾ ಬೇಡಿಕೆಗಳು)

ಉಪಾಧ್ಯಕ್ಷರು.—ನಾಲ್ಕು ಘಂಟೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕಾಗುತ್ತದೆ. ಇನ್ನೂ ಐದು ಜನ ಸದಸ್ಯರು ಮಾತನಾಡಬೇಕಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ದಯವಿಟ್ಟು ಹತ್ತು ಹತ್ತು ನಿಮಿಷ ಮಾತನಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ

† **ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ).**—ಸನ್ಮಾನ್ಯ ಅಧ್ಯಕ್ಷರೇ, ಕೊಳ್ಳೇಗಾಲದ ಪುರಸಭೆ ವಿಚಾರವಾಗಿ **ಮಾತ**ನಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಕೊಳ್ಳೇಗಾಲದ ಪುರಸಭೆಯು ಬಹಳ ತಿಂಗಳಿಂದ ಹಿಂದುಳಿದಂಥ ಪುರಸಭೆ ಆಗಿದೆ. ಏಕೆಂದರೆ ಅಲ್ಲಿ ನೀರಿನ ಬವಣೆ ಬಹಳಷ್ಟು ಹೆಚ್ಚಾಗಿದೆ. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಹಿಂದೆ ನಮ್ಮ ಬಿ. ಡಿ. ಜತ್ತಿ ಅವರ ಕಾಲದಲ್ಲಿ ೬ ಸಾವಿರ ಜನಸಂಖ್ಯೆ ಇದ್ದ ಒಂದು ಕಾಲದಲ್ಲಿ ಅಲ್ಲಿಗೆ ಅವರು ಬಂದು ಚಿಕ್ಕ ಟ್ಯಾಂಕನ್ನು ಓಪನ್ ಮಾಡಿದರು. ಈಗಿನ ಕಾಲದಲ್ಲಿ ನೋಡಿದಾಗ ೨೦ ವರ್ಷದ ಮೇಲಾಗಿದೆ. ಈಗ ನೀರಿನ ಬವಣೆ ಬಹಳ ಜಾಸ್ತಿಯಾಗಿದೆ. ಈಗ ೫೦ ಸಾವಿರ ಜನಸಂಖ್ಯೆ ಇರತಕ್ಕ ನಗರದಲ್ಲಿ ನೀರಿನ ಬವಣೆ ಹೆಚ್ಚಾಗಿದೆ. ಆದ್ದರಿಂದ ಸೆಕೆಂಡ್ ಸ್ಟೇಜ್ ವಾಟರ್ ಸಪ್ಲೈ ಸ್ಕೀಮ್‌ನ್ನು ತಕ್ಷಣದಲ್ಲೇ ತೆಗೆಸಿಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ: ಏಕೆಂದರೆ ಮಹದೇಶ್ವರ ಬೆಟ್ಟಕ್ಕೆ ಹೋಗುವ ಜನರೆಲ್ಲಾ ಅಲ್ಲಿಗೆ ಬರುತ್ತಾರೆ. ಅವರಿಗೆ ನೀರು ಬೇಕಾಗುತ್ತದೆ. ಈಗ ಅವರಿಗೆ ಒಳ್ಳೆಯ ನೀರು ಕೊಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿ ಸೆಕೆಂಡ್ ಸ್ಟೇಜ್‌ನ ಮೂಲಕ ಜರೂರಾಗಿ ಅಲ್ಲಿಗೆ ನೀರಿನ ವ್ಯವಸ್ಥೆ ಮಾಡಿಕೊಡಬೇಕು. ಮತ್ತೆ ಅಲ್ಲಿ ಪುರಸಭೆಯಲ್ಲಿರತಕ್ಕ ಸ್ಯಾನಿಟೇಶನ್ ವರ್ಕರ್ಸ್‌ಗೆ ಸ್ಥಳಾವಕಾಶ ಇಲ್ಲದೆ, ಮನೆ ಮಠ ಇಲ್ಲದೆ ಒಂದು ಪೆಡ್‌ಸಲ್ಲಿದ್ದುಕೊಂಡು ಕೆಲಸ ಮಾಡುತ್ತಿದ್ದಾರೆ. ದೇವರಾಜ ಅರಸರ ಕಾಲದಲ್ಲಿ ಮನೆಗಳನ್ನು ಕಟ್ಟಿಕೊಡಬೇಕೆಂದು ಸ್ವಲ್ಪ ಹಣ ಬಿಡುಗಡೆ ಮಾಡಿದರು. ಆದರೆ ಅಲ್ಲಿನ ಮುನಿಸಿಪಾಲಿಟಿ